# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 392
ಮಾನ್ಯ ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 13-08-2025
ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೆಶಿಪ್-3 ಯೋಜನೆಯಡಿಯಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-3 ರ ಅಡಿಯಲ್ಲಿ ಜುಲೈ-2025 ರ ಅಂತ್ಯಕ್ಕೆ ರೂ.3863.02 ಕೋಟಿಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.<br><br>ಕೆಶಿಪ್ ವತಿಯಿಂದ ಅಭಿವೃದ್ಧಿಪಡಿಸುವ ರಾಜ್ಯ ಹೆದ್ದಾರಿಗಳು ವಿವಿಧ ಜಿಲ್ಲೆಗಳು ಹಾಗೂ ವಿಧಾನಸಭಾ ಕ್ಷೇತ್ರಗಳಲ್ಲಿ ಹಾದುಹೋಗಿದ್ದು, ಯೋಜನೆಗೆ ಒಟ್ಟಾರೆಯಾಗಿ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಜಿಲ್ಲಾವಾರು ಪ್ರತ್ಯೇಕವಾಗಿ ಅನುದಾನ ಬಿಡುಗಡೆಯಾಗುವುದಿಲ್ಲ. |
| ಆ) | ಕೆಶಿಪ್-3 ಯೋಜನೆಯಲ್ಲಿ ಕಾಮಗಾರಿ ಪ್ರಗತಿಯಲ್ಲಿ ಇರುವುದು ಎಷ್ಟು; ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಉಳಿದಿರುವ ಮೊತ್ತ ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಕೆಶಿಪ್-3 ಯೋಜನೆಯಡಿಯಲ್ಲಿ ಒಟ್ಟು ಮೂರು ಪ್ಯಾಕೇಜ್‌ಗಳಲ್ಲಿ ಐದು ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಕಾಮಗಾರಿಗಳನ್ನು ರೂ.5334.00 ಕೋಟಿ ಯೋಜನಾ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಬಿಡುಗಡೆಯಾಗುವ ಅನುದಾನದಲ್ಲಿ ಬಿಲ್ಲುಗಳನ್ನು ಪಾವತಿಸುತ್ತಿದ್ದು, ಯಾವುದೇ ಅನುದಾನ ಬಾಕಿ ಉಳಿದಿರುವುದಿಲ್ಲ. |
| ಇ) | ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಹುಲಿಯೂರುದುರ್ಗ ಹೋಬಳಿಯ ಚೌಡನಕುಪ್ಪೆ ಗ್ರಾಮದಲ್ಲಿ ಕೆಶಿಪ್-3 ಯೋಜನೆಯ ಎಸ್‌ಹೆಚ್-85 ರವರು ಮಾಗಡಿ ಇಂದ ಸೋಮವಾರಪೇಟೆವರೆಗೆ ರಸ್ತೆ ನಿರ್ಮಾಣ ಮಾಡುತ್ತಿದ್ದು ಈ ಕಾಮಗಾರಿಗೆ ಬಿಡುಗಡೆಯಾದ ಅನುದಾನ ಎಷ್ಟು; ಮತ್ತು ಈ ಕಾಮಗಾರಿ ಸಂಪೂರ್ಣ ಮಾಡಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಕೆಶಿಪ್-3ರ ಯೋಜನೆಯಡಿಯಲ್ಲಿ ಪ್ಯಾಕೇಜ್-2ರಲ್ಲಿ ರಾಜ್ಯ ಹೆದ್ದಾರಿ-85:ಮಾಗಡಿಯಿಂದ ಸೋಮವಾರಪೇಟೆ ಗಡಿವರೆಗಿನ ಒಟ್ಟು 165.963 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಹೈಬ್ರಿಡ್ ಆನ್ಯೂಟಿ ಮಾದರಿಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಪ್ರಸ್ತುತ 151.723 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿರುತ್ತದೆ. ಇಲ್ಲಿಯವರೆಗೆ ಸದರಿ ಕಾಮಗಾರಿಗೆ ರೂ.628.71 ಕೋಟಿಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.<br><br>ಸದರಿ ಯೋಜನಾ ರಸ್ತೆಯು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಹುಲಿಯೂರುದುರ್ಗ ಹೋಬಳಿಯ ಚೌಡನಕುಪ್ಪೆ ಗ್ರಾಮದ ವ್ಯಾಪ್ತಿಯಲ್ಲಿ ಸರಪಳಿ 68.400 ಕಿ.ಮೀ ನಿಂದ 69.800 ಕಿ.ಮೀ ವರೆಗೆ ಹಾದುಹೋಗಿರುತ್ತದೆ. ಸದರಿ ಸರಪಳಿ ವ್ಯಾಪ್ತಿಯಲ್ಲಿ ಸುಮಾರು 900 ಮೀಟರ್ ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು, ಸರಪಳಿ 69.100 ಕಿ.ಮೀ ನಲ್ಲಿ ಮೇಜರ್ ಜಂಕ್ಷನ್ ಅಭಿವೃದ್ಧಿಪಡಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

<table>
<tr><td>ಈ)</td><td>ಮಳೆ ಬಂದ ಸಂದರ್ಭದಲ್ಲಿ ಚೌಡನಕುಪ್ಪೆ ಗ್ರಾಮದ ಹುಲಿಯೂರುದುರ್ಗ ರಸ್ತೆಯ (ಎಸ್‌ಹೆಚ್-85)ರ ಬಲಬದಿಯ ಚರಂಡಿಯಲ್ಲಿ ನೀರು ತುಂಬಿ ನೀರು ಮನೆಗಳಿಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅದಕ್ಕೆ ಕೈಗೊಂಡ ಕ್ರಮಗಳು ಏನು;</td><td rowspan="2">ಚೌಡನಕುಪ್ಪೆ ಗ್ರಾಮದ ವ್ಯಾಪ್ತಿಯಲ್ಲಿ ರಿಯಾಯಿತಿ ಕರಾರಿನಲ್ಲಿನ ಪ್ರಾವಧಾನ ಮಾಡಲಾಗಿರುವಂತೆ ನಿರ್ಮಿಸಲಾಗಿದ್ದ ಆರ್.ಸಿ.ಸಿ ಚರಂಡಿಯ ಮುಂದುವರೆದು ಭಾಗದಲ್ಲಿದ್ದ ಮಣ್ಣಿನ ಚರಂಡಿಯು ಮುಚ್ಚಿಹೋಗಿದ್ದ ಕಾರಣ ಮಳೆ ಬಿದ್ದ ಸಂದರ್ಭದಲ್ಲಿ ನೀರು ಸರಾಗವಾಗಿ ಹರಿದುಹೋಗಲು ಅಡಚಣೆಯಾಗಿ ಮನೆಗಳಿಗೆ ನೀರು ಬರುತಿತ್ತು. ಪ್ರಸ್ತುತ, ಆರ್.ಸಿ.ಸಿ ಚರಂಡಿಯ ಮುಂದುವೆರದ ಭಾಗದಲ್ಲಿ ಮುಚ್ಚಿಹೋಗಿದ್ದ ಚರಂಡಿಯ ಮಣ್ಣನ್ನು ತೆಗೆದು ಸರಿಪಡಿಸಿ ಪಕ್ಕದಲ್ಲಿರುವ ನಾಲೆಗೆ ನೀರು ಸರಾಗವಾಗಿ ಹರಿಯುವಂತೆ ಸಂಪರ್ಕ ವ್ಯವಸ್ಥೆ ಮಾಡಲಾಗಿರುತ್ತದೆ.</td></tr>
<tr><td>ಉ)</td><td>ಚೌಡನಕುಪ್ಪೆ ಗ್ರಾಮದಲ್ಲಿ ದೇವಸ್ಥಾನ ಮನೆಗಳು ಶಾಲೆಗಳು ಇದ್ದು ಸದರಿ ಚರಂಡಿ ನೀರು ತುಂಬಿ ಬರುತ್ತಿರುವುದರಿಂದ ಹಲವಾರು ಸಮಸ್ಯೆಗಳನ್ನು ಸಾರ್ವಜನಿಕರು ಎದುರಿಸುತ್ತಿದ್ದು ಅದಕ್ಕೆ ಎಷ್ಟು ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)</td></tr>
</table>

ಸಂಖ್ಯೆ:ಲೋಇ 203 ಇಎಪಿ 2025

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು